ನಿಮ್ಮೊಡನೆ

# ಬೇಸಿಗೆಯಲ್ಲಿ ಅರಳಲಿ ಬಾಲ್ಯ

ಬೇಸಿಗೆ ಬೇಗೆಯ ನಡುವೆಯೂ ಬಾಲ್ಯ ಅರಳುತ್ತದೆ. ಶಾಲಾ ರಜೆಗಳನ್ನು ಬಂಧು ಬಾಂಧವರೊಡನೆ ಕಳೆಯಲು, ನೆಂಟರಿಷ್ಟರ ಮನೆಗೆ ಪ್ರವಾಸಕ್ಕೆ ಹೋಗಲು ಮಕ್ಕಳೊಂದಿಗೆ ಪಾಲಕರೂ ಸಮಯ ಮಾಡಿಕೊಳ್ಳಬೇಕು. ಬಾಲ್ಯ ಅರಳಲು ಇದು ಸುಸಮಯ

ಬೇಸಿಗೆಯ ರಜೆ ಬಂದರೆ ಸಾಕು, ಅಜ್ಜನ ಮನೆ ತುಂಬಿ ತುಳುಕುವ ಕಾಲವೊಂದಿತ್ತು. ಮೊಮ್ಮಕ್ಕಳೆಲ್ಲ ಅಜ್ಜ ಅಜ್ಜಿ ಮನೆಯಲ್ಲಿ ಟೆಂಟು ಹೂಡಿದರೆ ಒಟ್ಟಿಗೆ ಉಣ್ಣುವ, ಮಲಗುವ, ಕೆರೆ–ಬಾವಿಗಳಿಗೆ ಹೋಗಿ ಸ್ನಾನ ಮಾಡುವ ಸಂಭ್ರಮವನ್ನು ಅನುಭವಿಸುತ್ತಿದ್ದರು. ನಗರೀಕರಣದಿಂದಾಗಿ ಅಜ್ಜನ ಮನೆ ಎಂಬ ಪರಿಕಲ್ಪನೆಯೇ ಮಾಯವಾಗಿದೆ. ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಬೆಳಕಿಗೆ ತರುತ್ತೇವೆ ಎಂಬ ಭರವಸೆಯ ಬೇಸಿಗೆ ಶಿಬಿರಗಳು ಶಾಲೆಗಳ ಮುಂದುವರಿದ ಕಲ್ಪನೆಯಂತೆಯೇ ಕಾಣುತ್ತವೆ. ಕೆಲವರು ಮಾತ್ರ ರಂಗಭೂಮಿಗಾಗಿ, ವಿಜ್ಞಾನಕ್ಕಾಗಿ ಸಂಗೀತಕ್ಕಾಗಿಯೇ ಮೀಸಲು ಎಂಬಂತೆ ಶಿಬಿರಗಳನ್ನು ನಡೆಸುತ್ತಾರೆ.

ಉದ್ಯೋಗಸ್ಥ ಅಮ್ಮ ಅಪ್ಪ ಇಬ್ಬರಿಗೂ ಮಗುವನ್ನು ಮನೆಯಲ್ಲಿ ಬಿಡಲಾಗದೆ, ಶಾಲಾ ಸಮಯದ ಬೇಸಿಗೆಯ ಶಿಬಿರವನ್ನು ಹುಡುಕಿ, ಜೇಬಿಗೆ ಭಾರವಾದರೂ ಕಳುಹಿಸುವ ವ್ಯವಸ್ಥೆ ಮಾಡಿರುತ್ತಾರೆ. ಮಗುವು ಸುರಕ್ಷಿತ ವಾತಾವರಣದಲ್ಲಿರುತ್ತದೆ ಎಂಬ ನಂಬಿಕೆ ಪಾಲಕರದ್ದು. ಬೇಸಿಗೆ ಶಿಬಿರಗಳ ಆಯ್ಕೆ ಸಾಮಾನ್ಯವಾಗಿ ಮಗುವಿನ ವ್ಯಕ್ತಿತ್ವಕ್ಕಿಂತಲೂ ಅಪ್ಪ ಅಮ್ಮನ ಆರ್ಥಿಕ ಸ್ಥಿತಿ, ಬಿಟ್ಟು ಕರೆತರುವ ಅನುಕೂಲ ಇಂಥವುಗಳನ್ನೇ ಅವಲಂಬಿಸಿರುತ್ತದೆ.

ಅಜ್ಜನ ಮನೆ, ಬಂಧು ಬಳಗದ ಮನೆಗಳಲ್ಲಿ ಮಕ್ಕಳೊಂದಿಗೆ ಹಂಚಿಕೊಳ್ಳುವ, ಪಾಲ್ಗೊಳ್ಳುವ, ಸೋಲು ಗೆಲುವನ್ನು ಸಂಭ್ರಮಿಸುವ, ಸ್ವೀಕರಿಸುವ ಮನೋಭಾವವನ್ನು ಸಹಜವಾಗಿಯೇ ಮಕ್ಕಳು ಕಲಿಯುತ್ತಿದ್ದವು. ಇದೀಗ ವಸತಿ ಸಹಿತ ಶಿಬಿರಗಳಲ್ಲಿ ತಮ್ಮ ವಸ್ತುಗಳನ್ನು ಸುರಕ್ಷಿತವಾಗಿರಿಸಿಕೊಳ್ಳುವ ಜವಾಬ್ದಾರಿಯೇ ಅತಿ ಹೆಚ್ಚಿನದಾಗಿ ಕಾಣುತ್ತದೆ. ಹಂಚಿಕೊಳ್ಳುವ ಬದಲು ತಮಗೆ ಸೇರಿದ್ದನ್ನು ಹೊಂಚಿ ಇರಿಸಿಕೊಳ್ಳುವುದೇ ಆಗುತ್ತದೆ. ಇವೂ ಬದುಕಿಗೆ ಬೇಕಿರುವ ಕೌಶಲಗಳೇ. ಸ್ವಕೇಂದ್ರಿತ ವ್ಯಕ್ತಿತ್ವದ ಬೆಳವಣಿಗೆಯಾಗುವ ಸಾಧ್ಯತೆಯೂ ಅಲ್ಲಗಳೆಯುವಂತಿಲ್ಲ.

ಪ್ರತಿ ಮಕ್ಕಳೂ ವಿಶೇಷ ಎನ್ನುವುದು ಪ್ರತಿ ಮಗುವಿನ ಅನುಭವಕ್ಕೂ ಬರುವಂತಹ ಶಿಬಿರಗಳಿದ್ದರೆ ಮನೋವಿಕಾಸ ಸಹಜವಾಗಿ ಆಗುತ್ತದೆ. ರಜೆಯಲ್ಲಿಯೂ ಕೋಚಿಂಗ್ ಮತ್ತು ಅಂಕಗಳಿಗಾಗಿ, ಮಕ್ಕಳನ್ನು ದಂಡಿಸುತ್ತಲೇ ಇದ್ದರೆ ಗುಲಾಮರನ್ನು ಸೃಷ್ಟಿಸುವ ಕಾರ್ಖಾನೆಗಳನ್ನೇ ಹುಡುಕಿದಂತಾಗುತ್ತದೆ.

ಬಿನ್ನೆತ್ತೆ ಓದುವ ಮಕ್ಕಳಿಗೂ ಬ್ರಿಜ್ ಕೋರ್ಸ್ ಇಡುತ್ತಿರುವುದು ಯಾವ ಕಾರಣಕ್ಕಾಗಿ? ಅದೆಂಥ ಬ್ರಹ್ಮಜ್ಞಾನವನ್ನು ಈ ರಜೆಯಲ್ಲಿ ಮಕ್ಕಳಿಗೆ ಕಲಿಸಿಕೊಡಲಿದ್ದಾರೆ? ಅದ್ಯಾವುದನ್ನು ಮಗುವು ಮರೆತು ಹೋಗುವ ಆತಂಕ ಕಾಡುತ್ತಿದೆ? ಶಾಲೆಗಳ ಅತಿ ಕಾಳಜಿ, ಪಾಲಕರ ಕೆಲಸದ ಒತ್ತಡ ಇವೆಲ್ಲವೂ ಮಕ್ಕಳನ್ನು ಅರಳುವ ಸಂದರ್ಭಗಳಿಂದ ವಂಚಿತರಾಗಿಸುತ್ತಿವೆ. ಇದೀಗ ತಾನೆ ಕಣ್ತೆರೆದು ಲೋಕವನ್ನು ನೋಡುವ ಐದು ವರ್ಷದೊಳಗಿನ ಮಕ್ಕಳಿಗೆ ಬ್ರಿಜ್ ಕೋರ್ಸ್ ಅಗತ್ಯವಿದೆಯೇ? ಒಂದಿಡೀ ಶೈಕ್ಷಣಿಕ ವರ್ಷದಲ್ಲಿ ಪೂರೈಸಬೇಕಾದ ಪಠ್ಯಕ್ರಮವನ್ನು ರಜೆಯಲ್ಲಿಯೇ ಮುಗಿಸಿ, ಶೈಕ್ಷಣಿಕ ವರ್ಷವನ್ನೇ ಪುನರಾವರ್ತನೆಗೆ ಇರಿಸಿದಂತಾಗುತ್ತಿದೆ. ಈ ಇಡೀ ವ್ಯವಸ್ಥೆಯನ್ನು ದೂಷಿಸುವುದು ಸುಲಭ. ಪರಿಹಾರ ಮಾರ್ಗಗಳ ಕಡೆಗೆ ಯೋಚಿಸಬೇಕಾದವರು ಯಾರು?


ಎಳೆ ಮಕ್ಕಳಾದರೆ ಅಪ್ಪ ಅಮ್ಮ ಕೆಲಸ ಮಾಡುವ ಕಚೇರಿಗಳಲ್ಲಿ ಒಂದೆರಡು ತಿಂಗಳ ಮಟ್ಟಿಗಾದರೂ ಕ್ರಶ್‌ಗಳನ್ನು ತೆರೆಯಲಿ. ಅದಕ್ಕೆ ತಗಲುವ ಖರ್ಚನ್ನು ಪಾಲಕರಿಂದಲೇ ಭರಿಸಲಿ. ಅಷ್ಟು ಸಮಯವಾದರೂ ಮಕ್ಕಳು ಹೆತ್ತವರೊಂದಿಗೆ ಇರುವಂತಾಗುತ್ತದೆ. ಮನೆಯಿಂದ ಕೆಲಸ ನಿರ್ವಹಿಸುವ ಆಯ್ಕೆಯನ್ನೂ ಪರಿಗಣಿಸಬಹುದು.

ರಜೆಯಲ್ಲಿ ಮಕ್ಕಳು ವಿರಾಮವಾಗಿ, ಆರಾಮವಾಗಿ ಇರಲೆಂದೇ ಈ ಕಾಲ. ಬಿಸಿಲೇರಿದಾಗ ಮನೇಲಿದ್ದು, ಸಾಕಷ್ಟು ನೀರು ಕುಡಿದು, ಬೇಕಾಗಿದ್ದು ಉಂಡು ತಿನ್ನುವ ಈ ಸಮಯವನ್ನು ಹಾಗೆಯೇ ಉಳಿಸಲು ಸಾಧ್ಯವಾದಷ್ಟೂ ಪ್ರಯತ್ನಿಸುವ ಹೊಣೆ ಹೆತ್ತವರದ್ದಾಗಿದೆ. ಮೊಬೈಲು ಫೋನು ಕೊಡದೆ, ಪುಸ್ತಕಗಳನ್ನು ಓದಿಸುತ್ತ, ಡಿಕ್ಟೇಶನ್ ನೀಡುತ್ತ, ಶುದ್ಧ ಬರಹ ಬರೆಯಿಸುತ್ತ, ಕಥಾ ಕಾರ್ಡು ನೀಡಿ, ಕತೆ ಹೆಣೆಯಲು ಹೇಳುತ್ತ ಈ ಸಮಯದ ಸದುಪಯೋಗ ಪಡೆಯಬಹುದಾಗಿದೆ. ರಜೆ ಸಿಕ್ಕಲ್ಲಿ ಸಣ್ಣ ಸಣ್ಣ ಪ್ರವಾಸಗಳನ್ನೂ ಹಮ್ಮಿಕೊಳ್ಳಬಹುದು. ನೆಂಟರ, ಸ್ನೇಹಿತರ ಮಕ್ಕಳೊಂದಿಗೆ ಮನೆಯಲ್ಲೇ ಸಮಯ ಕಳೆಯುತ್ತ ಅವರ ಅಭಿರುಚಿಗಳನ್ನು ಪತ್ತೆ ಮಾಡಬಹುದಾಗಿದೆ.

ಬ್ರಿಜ್ ಕೋರ್ಸ್ ಅಥವಾ ಸೇತುಬಂಧ ತರಬೇತಿಯು ಹತ್ತನೇ ಕ್ಲಾಸಿನ ನಂತರ ವಿವಿಧ ವಿಭಾಗಗಳನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಸಮಂಜಸವೆನಿಸುತ್ತದೆ. ಉಳಿದವರಿಗೆ ಈ ಸಂದರ್ಭದಲ್ಲಿಯಾದರೂ ತಮ್ಮ ಆಸಕ್ತಿ, ಅಭಿರುಚಿಗಳನ್ನು ಗುರುತಿಸುವ ಸಮಯವಾದರೂ ಸಿಗುತ್ತದೆ. ಮುಂದಿನ ಹಾದಿ ಗುರುತಿಸುವ ಅರಿವು ಅವರಿಗೇ ದೊರೆಯುತ್ತದೆ. ಸಮವಯಸ್ಕರ ಒತ್ತಡದಿಂದಾಗಿ ತಮಗಿಷ್ಟವಿಲ್ಲದ ಕೋರ್ಸು ಸೇರಿ ನಂತರ ಪಶ್ಚಾತ್ತಾಪ ಪಡುವ ಮಕ್ಕಳೂ ನಮ್ಮ ಸುತ್ತಮುತ್ತ ನೋಡಲು ಸಿಗುತ್ತಾರೆ. ಈ ರಜೆಯಲ್ಲಿ ಎಲ್ಲವನ್ನೂ ಪರಾಮರ್ಶಿಸುವ ಸಮಯ ನೀಡಿದರೆ ಒಳಿತು.

ಈ ರಜಾ ಸಮಯದಲ್ಲಿ ಮಕ್ಕಳೊಂದಿಗೆ ಗುಣಮಟ್ಟದ ಸಮಯವನ್ನು ಕಳೆಯಲು ಆರಂಭಿಸಿ. ನಂತರ ಅದೇ ಅಭ್ಯಾಸವಾಗುತ್ತದೆ. ಮಕ್ಕಳೊಂದಿಗೆ ಪ್ರವಾಸ ಕೈಗೊಳ್ಳುವುದರಿಂದ, ಪುಸ್ತಕಗಳನ್ನು ಓದುವುದರಿಂದ ಮತ್ತೆ ಇಡೀ ವರ್ಷ ದುಡಿಯಲು ಒಂದು ಸ್ಫೂರ್ತಿಯಂತೂ ಇರುತ್ತದೆ. ಪ್ರಯಾಣಗಳು ನಮ್ಮ ಬಾಂಧವ್ಯವನ್ನು ದೃಢಗೊಳಿಸುತ್ತವೆ. ಇಂಥ ಮಕ್ಕಳು ಯಾವತ್ತಿಗೂ ಫೇಲಾದ ಕಾರಣಕ್ಕೆ ಹೆತ್ತವರ ಹೆಗಲ ಮೇಲೆ ಅವರ ಕನಸಿನ ಶವ ಇರಿಸಲಾರವು. ರಜೆಯಲ್ಲಿ ಅರಳುವುದು ಮಕ್ಕಳಿಗೂ ಹೆತ್ತವರಿಗೂ ಅಗತ್ಯವಾಗಿದೆ.

**ರಶ್ಮಿ ಎಸ್**



ವಿಜಯ